# ದುರ್ಗದಲ್ಲಿ ಹುಲಿ ಶಿಕಾರಿ

ಹುಲಿ ಶಿಕಾರಿ ಹಿಂದೆ ಹವ್ಯಾಸವಾಗಿದ್ದು, ರಾಜ ಮಹರಾಜರುಗಳ ಪ್ರತಿಷ್ಠೆಯ ವಿಷಯವಾಗಿತ್ತು. ಅಂದು ಹುಲಿ ಶಿಕಾರಿಗೆ ಸನ್ಮಾನ, ಭಕ್ಷಿಸು, ಇಂದು ಶಿಕ್ಷಾರ್ಹ ಅಪರಾಧ.. ದುರ್ಗದ ಇತಿಹಾಸ ಪುಟದಲ್ಲಿ ಹುಲಿ ಕಥೆಗಳು ಸಾಕಷ್ಟಿವೆ. ಪಾಳೇಗಾರರ ಹೆಸರು ಹೆಬ್ಬುಲಿ ಮದಕರಿನಾಯಕ, ಬಿರುದು ಗಾದ್ರಿಮಲ್ಲೆ ಹೆಬ್ಬುಲಿ ಎಂಬುದಾಗಿ ಇತ್ತು. ದುರ್ಗದ ಜೋಗಿಮಟ್ಟಿ ಅರಣ್ಯದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ 50ಕ್ಕಿಂತ ಹೆಚ್ಚು ಹುಲಿಗಳಿದ್ದವು ಎಂದು ಹೇಳುತ್ತಾರೆ.

ಹುಲಿ ಶಿಕಾರಿ ದಾಸಣ್ಣನವರ ಮನೆಗೆ ಹೋಗಿ ಹಳೇ ಸರಕು ತುಂಬಿದ ಅಟ್ಟದ ಮೇಲೆ ಹುಡುಕಿದಾಗ ಈ ಚಿತ್ರ ಪಟ ಸಿಕ್ಕಿತು (1945). ಮೂರನೇ ತಲೆಮಾರಿನ ಗಿರೀಶ್ ಚಿಕ್ಕಪ್ಪ ಕಿಟ್ಟಣ್ಣ  ಅದರ ವಿವರ ಬಿಚ್ಚಿಟ್ಟರು. ಅದರಲ್ಲಿ ಗೌರವಿಸಲ್ಪಟ್ಟ ವ್ಯಕ್ತಿ ವೆಂಕಟಪ್ಪನವರು ಬೆಂಗಳೂರಿನ ಉಪ್ಪಾರಪೇಟೆ ನಿವಾಸಿ. ಅವರು ವರ್ಷಕ್ಕೊಮ್ಮೆ ಹುಲಿ ಶಿಕಾರಿ ಮಾಡಲು ದುರ್ಗಕ್ಕೆ ಬಂದು ತಿಂಗಳುಗಟ್ಟಲೆ ಮೊಕ್ಕಾಂ ಮಾಡಿ ಹುಲಿ ಶಿಕಾರಿ ಮಾಡುತ್ತಿದ್ದರಂತೆ. ಅದರಂತೆಯೇ ಪಕ್ಕದಲ್ಲಿ ಕುಳಿತಿರುವವರು ಗೋವಿಂದಪ್ಪ ಉಪ್ಪಾರ್. ಅವರು ದಾಸಣ್ಣನವರ ತಮ್ಮಂದಿರು ಎಂದು ತಿಳಿದು ಬಂದಿತು. ದುರ್ಗದ ಹುಲಿ ಶಿಕಾರಿ ಕಥೆಗಳು ರೋಚಕವಾಗಿದ್ದು, ಮುಂದಿನ ಪೀಳಿಗೆಗೆ ಜ್ಞಾಪಕಾರ್ಥವಾಗಿ ಈ ಚಿತ್ರ.

**-ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**





# ಸೆಂಟ್‌ಮೇರಿ ದ್ವೀಪದ ಗಾಂಧೀಜಿ

ಉಡುಪಿ ಹತ್ತಿರವಿರುವ ಮಲ್ಪೆ ಬೀಚ್‌ನಿಂದ ದೋಣಿಯಲ್ಲಿ ಸೆಂಟ್‌ಮೇರಿ ದ್ವೀಪಕ್ಕೆ ಪ್ರವಾಸಿಗರು ತೆರಳದೆ ಇರಲಾರರು. ಸುಂದರ ದ್ವೀಪ, ದೊಡ್ಡ ದೊಡ್ಡ ಬಂಡೆಗಳು, ಸಮುದ್ರದ ಅಲೆಗಳ ಬೀಚ್ ನೋಡುವ ಮುಂಚೆ, ಮಹಾತ್ಮ ಗಾಂಧೀಜಿ ಅವರ ಪ್ರತಿಮೆಯನ್ನು ನಾವು ನೋಡಬಹುದು. ಸಮುದ್ರದ ತಂಗಾಳಿ, ನೊರೆಭರಿತ ಅಲೆಗಳ ಆರ್ಭಟವಿರುವ ಇಲ್ಲಿ ಪ್ರವಾಸಿಗರ ದಂಡು ಬೇಸಿಗೆಯಲ್ಲಿ ಹೆಚ್ಚು.

**-ಶ್ರೀಧರ ರಾಯಸಂ, ಬೆಂಗಳೂರು**

# ಕಲಾವಿದನ ಕೈಯಲ್ಲಿ ಅರಳಿದ ಹಸು

ಇಲ್ಲಿ ನೋಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಭಾಗಿತ್ವದಲ್ಲಿ ಬೈಲಹೊಂಗಲದಲ್ಲಿ 37ನೇ ರಾಜ್ಯ ಮಟ್ಟದ ಕೃಷಿ ಮೇಳ ಆಯೋಜಿಸಲಾಗಿತ್ತು. ಅಲ್ಲಿ ಗಮನಸೆಳೆದ ಹಾಲು ಉಣಿಸುತ್ತಿರುವ ಹಸು ಕಂಡು ಏನು ಹಸು ಸ್ವಲ್ಪವೂ ಕದಲದೆ ನಿಂತಿದೆಯಲ್ಲ ಎಂದು ಆಶ್ಚರ್ಯಚಕಿತರಾದೆವು. ಪಕ್ಕದಲ್ಲಿದ್ದವರು ಇದು ಪ್ಲಾಸ್ಟರ್ ಆಫ್ ಪ್ಯಾರಿಸ್‌ದಿಂದ ಮಾಡಿದ್ದು ಎಂದಾಗ ಕಲಾವಿದನ ಕೈಚಳಕಕ್ಕೆ ಬೆರಗಾದೆನು.

**-ಶ್ರೀಶೈಲ ಎಸ್. ಅಂಗಡಿ, ಹುಣಶೀಕಟ್ಟಿ**

